# ಬೀಜದಿಂದ ಹೆಮ್ಮರವಾದ ಕನ್ನಡ ಸಾಹಿತ್ಯ ಚರಿತ್ರೆ

**ಪಾಲಯ್ಯ ಪಿ.**

ಉಪನ್ಯಾಸಕರು, ಎಚ್.ಸಿ.ಬಿ. ಸ್ಮಾರಕ ಪ.ಜಾ/ಪ.ಪಂ. ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಜಗಳೂರು.

DOI: https://doi.org/10.5281/zenodo.17255952

## ABSTRACT:

ಒಂದು ಬೀಜದ ಒಳಗೆ ಹಲವು ಮರಗಳ ಸೃಷ್ಟಿ ಅಡಗಿರುತ್ತವೆ. ಅಂದರೆ ಬೀಜವು ಮೊಳಕೆ ಒಡೆದು ಲಕ್ಷಾಂತರ ಸಸ್ಯ ಸಂಕುಲಗಳ ಸೃಷ್ಟಿಗೆ ಕಾರಣೀಭೂತವಾಗಿರುತ್ತದೆ. ಹೇಗೆಂದರೆ ಬೀಜ ಮೊಳಕೆ ಒಡೆದು ಮರವಾಗಿ ಬೆಳೆದು ಲಕ್ಷಾಂತರ ಬೀಜಗಳನ್ನು ಈ ಪ್ರಕೃತಿಗೆ ಕೊಟ್ಟು ಕಗ್ಗಾಡನ್ನು ಸೃಷ್ಟಿಸುವ ಹಾಗೆ ಕನ್ನಡ ಸಾಹಿತ್ಯ ಎಂಬುವುದು ಕೇವಲ ಸಂವಹನ ಭಾಷೆಯಾಗಿರದೆ ಅನೇಕ ರೀತಿಯ ಸಾಹಿತ್ಯ ಪ್ರಕಾರಗಳನ್ನ ತನ್ನೊಳಗೆ ಅಡಗಿಸಿಗೊಂಡು ಬೆಳೆದು ನಿಂತ ಹೆಮ್ಮರದ ಸಾಹಿತ್ಯವಾಗಿದೆ. ಜಗತ್ತಿನ ಇತರೆ ಭಾಷೆಗಳಿಗೆ ಹೋಲಿಸಿದರೆ ವಿಶಿಷ್ಟ ರೀತಿಯ ಸಾಹಿತ್ಯ ಪ್ರಕಾರಗಳು ಕನ್ನಡ ಸಾಹಿತ್ಯದಲ್ಲಿ ಕಂಡುಬರುತ್ತವೆ. ಉದಾಹರಣೆಗೆ: ವಚನ ಸಾಹಿತ್ಯ, ಷಟ್ಪದಿ ಸಾಹಿತ್ಯ, ರಗಳೆ ಸಾಹಿತ್ಯ, ಸಾಂಗತ್ಯ ಇನ್ನು ಅನೇಕ ಸಾಹಿತ್ಯ ಪ್ರಕಾರಗಳು ಅನ್ಯಭಾಷೆಯ ಸಾಹಿತಿಗಳ ಕಲ್ಪನೆಗೂ ನಿಲುಕದ ಸಾಹಿತ್ಯ ರಚನೆಯು ಕನ್ನಡದಲ್ಲಿ ಮೂಡಿ ಬಂದಿದೆ. ಇದು ಕನ್ನಡ ಭಾಷೆಯ ವೈಶಿಷ್ಟ್ಯವಾಗಿದೆ. ಕನ್ನಡ ಭಾಷೆ ಶಿಷ್ಟಸಾಹಿತ್ಯ ಅಷ್ಟೇ ಅಲ್ಲದೆ ಮೌಖಿಕ ಸಾಹಿತ್ಯದಲ್ಲೂ ಸಹ ಅನ್ಯಭಾಷೆಯ ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಎಲ್ಲೂ ಇಲ್ಲದ ಸಾಹಿತ್ಯ ಪ್ರಕಾರಗಳು ಇದರಲ್ಲಿ ಹುಟ್ಟುಕೊಂಡಿವೆ. ಉದಾಹರಣೆ: ಜನಪದ ಗೀತೆಗಳು, ಜನಪದ ಕತೆಗಳು, ಜನಪದ ಪೌರಾಣಿಕ ಕಥೆಗಳು, ಜನಪದ ಒಡಪುಗಳು, ಜನಪದ ಒಗಟುಗಳು, ಜನಪದ ರಂಗರೂಪಗಳು, ಜನಪದ ನಂಬಿಕೆಗಳು, ಜನಪದ ನೃತ್ಯಗಳು, ಜನಪದ ಸಂಗೀತ, ಜನಪದ ಯಕ್ಷಗಾನ, ಜನಪದ ಗೊಂಬೆಯಾಟ ಹೀಗೆ ಇನ್ನು ಮುಂತಾದ ಜನಪದ ಸಾಹಿತ್ಯ ಪ್ರಕಾರಗಳು ಕಂಡುಬರುತ್ತವೆ. ಇದು ಕನ್ನಡ ಭಾಷೆಗೆ ಇರುವ ಶಕ್ತಿ ಅಥವಾ ವೈಶಿಷ್ಟ್ಯದ ಶಕ್ತಿ ಎಂದು ಹೇಳಿದರೆ ಅತಿಶಯೋಕ್ತಿ ಆಗಲಾರದು.

## KEYWORDS:

ಭಾಷೆ, ಇಸಿಲ, ಚಿತ್ತಣ, ಬೆದಂಡೆ, ಪಗರಣ, ಅಷ್ಟದಶವರ್ಣನೆ, ಷಟ್ಪದಿ, ಕಥನ, ಕೀರ್ತನೆ, ಆವಿಷ್ಕಾರ, ವಚನ, ತಿರುಳ್ಗನ್ನಡ.

ಕನ್ನಡವು ಒಂದು ಭೂಪ್ರದೇಶದ ಹೆಸರು ಹೌದು ಮತ್ತು ಜನರು ಮಾತನಾಡುವ ಭಾಷೆಯು ಹೌದು, ಕನ್ನಡ ಎಂಬ ಭಾಷೆ ದಕ್ಷಿಣ ಭಾರತದಲ್ಲಿ ಒಂದು ಪ್ರಮುಖವಾದ ಭಾಷೆಯಾಗಿ ಬಳಕೆಯಲ್ಲಿದೆ, ಇದು ದ್ರಾವಿಡ ಭಾಷೆಯಿಂದ ಕವಲೊಡೆದು ಒಂದು ಸ್ವತಂತ್ರ ಭಾಷೆಯಾಗಿ ರಚನೆಗೊಂಡು ಬಳಕೆಗೆ ಬಂದಿದೆ. ಈ ಭಾಷೆಯ ಜೊತೆಗೆ ಉಳಿದ ದ್ರಾವಿಡ ಭಾಷೆಗಳಾದ ತಮಿಳು, ತೆಲುಗು, ತುಳು, ಮಲೆಯಾಳಂ. ಇವು ಮೂಲ ದ್ರಾವಿಡ ಭಾಷೆಯಿಂದ ಕವಲೊಡೆದು ಪಂಚದ್ರಾವಿಡ ಭಾಷೆಗಳಾಗಿ ಹೊರಹೊಮ್ಮಿವೆ. ಇದರಲ್ಲಿ ತಮಿಳು ಸಾಹಿತ್ಯ ಅಥವಾ ಭಾಷೆ ಅತ್ಯಂತ ಪ್ರಾಚೀನ ಸಾಹಿತ್ಯ ಮತ್ತು ಭಾಷೆಯಾಗಿದೆ. ಇದನ್ನು ಹೊರತುಪಡಿಸಿದರೆ ಕನ್ನಡವೇ ಅತಿ ಪ್ರಾಚೀನವಾದ ಭಾಷೆಯಾಗಿದೆ. ಈ ಪಂಚದ್ರಾವಿಡ ಭಾಷೆಯಲ್ಲಿ ತಮಿಳು ಸಾಹಿತ್ಯಕ್ಕೆ 2004ರಲ್ಲಿ ಕೇಂದ್ರ ಸರ್ಕಾರ ಶಾಸ್ತ್ರೀಯ ಸ್ಥಾನಮಾನ ದೊರಕಿಸಿಕೊಟ್ಟರೆ, ಕನ್ನಡ ಭಾಷೆಗೆ 2008 ಸೆಪ್ಟೆಂಬರ್ 11 ರಂದು ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರಕಿಸಿಕೊಟ್ಟಿದೆ. ಇದು ಭಾಷೆ ದೃಷ್ಟಿಯಿಂದ ನೋಡುವ ನೋಟವಾದರೆ, ಕನ್ನಡ ಸಾಹಿತ್ಯ ಎಂಬುವುದು ಪ್ರಾರಂಭದಲ್ಲಿ ಒಂದು ಬೀಜವಾಗಿದ್ದು ನಂತರ ನಿಧಾನವಾಗಿ ದೊಡ್ಡ ಕಗ್ಗಾಡನ್ನು ಸೃಷ್ಟಿಸಿ ಹೆಮ್ಮರವಾಗಿ ಬೆಳೆದು ನಿಂತಿರುವ ಕನ್ನಡ ಸಾಹಿತ್ಯವನ್ನು 'ಬೀಜದಿಂದ ಮರವಾದ ಕನ್ನಡ ಸಾಹಿತ್ಯ' ಎಂಬ ಶೀರ್ಷಿಕೆ ಅಡಿಯಲ್ಲಿ ಚರ್ಚಿಸಿದ್ದೇನೆ.

ಕನ್ನಡ ಭಾಷೆ ಅಥವಾ ಸಾಹಿತ್ಯಕ್ಕೆ ಸುಮಾರು 2000 ವರ್ಷಗಳಿಗಿಂತ ಸುದೀರ್ಘ ಇತಿಹಾಸ ಇದ್ದು, ಇದರ ಪ್ರಾಚೀನತೆಯನ್ನು ಪ್ರಾಚೀನ ಕವಿಗಳ ಸಾಹಿತ್ಯದ ಆಧಾರದಿಂದ ಕನ್ನಡ ಸಾಹಿತ್ಯ ಎಂಬ ಹೆಮ್ಮರವನ್ನು ಅರಿಯಬಹುದು. ಹಾಗಾಗಿ ಇದರ ಬೆಳವಣಿಗೆ ಮತ್ತು ಇತಿಹಾಸವನ್ನು ನಾವು ಪ್ರಾಚೀನ ಸಾಹಿತ್ಯದಿಂದ ಅಭ್ಯಾಸ ಮಾಡುವುದು ಸೂಕ್ತ. ಕರ್ನಾಟಕ ಎಂಬ ಪದ ಮೊದಲು ನಮಗೆ ಉಲ್ಲೇಖವಾಗಿ ಕಂಡುಬರುವುದು ತಮಿಳು ಸಾಹಿತ್ಯದ ಶಿಲಪ್ಪದಿಕಾರಂ ಎಂಬ ಕೃತಿಯಲ್ಲಿ. ಇದು ದಕ್ಷಿಣ ಭಾರತದ ಮೊಟ್ಟಮೊದಲ ಮಹಾಕಾವ್ಯವಾಗಿ ನಮಗೆ ಕಂಡುಬರುತ್ತದೆ. ಇದರಲ್ಲಿ ಕನ್ನಡದ ಅಥವಾ ಕರುಕರ್ನಾಟಕ ಕರುನಾಡರ್, ಕರುನಾಡು, ಕರ್ನಾಟಕ ಎಂಬ ಪದದ ರೂಪವನ್ನು ನಾವು ಕಾಣುತ್ತೇವೆ. ಪ್ರಾಚೀನ ಕವಿಗಳು ಕರ್ನಾಟಕವನ್ನು ಈ ಮೇಲೆ ತಿಳಿಸಿದ ವಿವಿಧ ರೂಪಗಳಲ್ಲಿ ಉಲ್ಲೇಖಿಸಿರುವುದು ನಮಗೆ ಅರಿವಾಗುತ್ತದೆ. ಹೀಗೆ ಕನ್ನಡ ನಾಡಿನ ಉಲ್ಲೇಖವನ್ನು ಸುಮಾರು ವರ್ಷಗಳ ಹಿಂದೆ ಗುರುತಿಸಿರುವುದು ನಮಗೆ ಅತ್ಯಂತ ಪ್ರಾಚೀನ ಸಾಹಿತ್ಯ ಕೃತಿಗಳಿಂದ ತಿಳಿದುಬರುತ್ತದೆ. ಇದು ಕನ್ನಡ ನಾಡನ್ನು ಗುರುತಿಸುವ ಚರಿತ್ರೆಯ ದಾರಿಯಾದರೆ ಇನ್ನು ಕನ್ನಡ ಸಾಹಿತ್ಯ ಚರಿತ್ರೆಯ ಜಾಡನ್ನು ತಿಳಿಸುವುದು ಮತ್ತೊಂದು ಸವಾಲಾಗಿದೆ.

ಕನ್ನಡ ಸಾಹಿತ್ಯವು ಸುಮಾರು 2000 ವರ್ಷಗಳ ಹಿಂದೆ ನಮಗೆ ರಚನೆ ಆಗಿದೆ ಎಂಬುದನ್ನು ಪ್ರಾಚೀನ ಸಾಹಿತ್ಯದ ಆಧಾರದ ಮೇಲೆ ತಿಳಿದುಕೊಳ್ಳಬಹುದಾಗಿದೆ.

ಇದರ ಪ್ರಾಚೀನತೆಯನ್ನು ನಿಖರವಾಗಿ ಗುರುತಿಸುವುದು ಕಷ್ಟದ ಕೆಲಸವಾದರೂ, ಇದನ್ನು ಕೆಲವು ವಿದ್ವಾಂಸರು ಅಲ್ಲಲ್ಲಿ ಸಿಕ್ಕ ಆಧಾರಗಳ ಮೇಲೆ ಸಾಹಿತ್ಯದ ಪ್ರಾಚೀನತೆಯನ್ನು ಗುರುತಿಸಿದ್ದರೆ. ಎಲ್ಲಾ ಭಾಷೆಗಳಿಗೆ ಇರುವಂತೆ ಕನ್ನಡ ಭಾಷೆ ಮೊದಲು ಬಾಯಿಂದ ಬಾಯಿಗೆ ಹರಿದು ಬರುವ ಸಾಹಿತ್ಯದ ಅಭಿವ್ಯಕ್ತಿ ಇದ್ದಿರಬಹುದು. ಕನ್ನಡ ಸಾಹಿತ್ಯದ ಮೊಟ್ಟಮೊದಲ ಗ್ರಂಥ ಎಂದೆನಿಸಿಕೊಂಡಿರುವ'ಕವಿರಾಜಮಾರ್ಗ'ದಲ್ಲಿ ಕನ್ನಡ ಸಾಹಿತ್ಯ ಇದ್ದ ಬಗೆಯನ್ನು ಅಥವಾ ಸುಳಿವನ್ನು ಈ ಗ್ರಂಥದಿಂದ ತಿಳಿದುಕೊಳ್ಳಬಹುದು. ಆದರೂ ಇದಕ್ಕಿಂತ ನಮಗೆ ಕ್ರಿ.ಶ. 450ರ ಹಲ್ಮಿಡಿ ಶಾಸನದಿಂದ ಕನ್ನಡ ಸಾಹಿತ್ಯದ ಬಗ್ಗೆ ನಮಗೆ ಸಾಕಷ್ಟು ಮಾಹಿತಿ ದೊರೆಯುತ್ತದೆ. ಇದು ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಹಲ್ಮಿಡಿ ಗ್ರಾಮದಲ್ಲಿ ಸಿಕ್ಕಿದ್ದ ಕನ್ನಡದ ಮೊಟ್ಟಮೊದಲ ಶಾಸನವಾಗಿದ್ದು ಇದನ್ನು 1936ರಲ್ಲಿ ಡಾ.ಎಂ.ಹೆಚ್. ಕೃಷ್ಣ ರವರು ಪತ್ತೆಹಚ್ಚಿದರು. ಇದರಲ್ಲಿರುವ ಕನ್ನಡದ ಮೊಟ್ಟಮೊದಲ ಶಬ್ದವಾದ 'ಇಸಿಲ' ಎಂಬ ಪದವನ್ನು ಶೋಧಿಸಿದರು. ಇದು ಕನ್ನಡದ ಮೊಟ್ಟಮೊದಲ ಪದವಾಗಿ ನಮಗೆ ಸಿಗುತ್ತದೆ. ಇಲ್ಲಿಂದ ನಮಗೆ ಕನ್ನಡ ಸಾಹಿತ್ಯದ ಬೀಜದ ಉದಯಿಸುವ ಮಾರ್ಗದ ದಾರಿ ಸಿಗುತ್ತದೆ. 'ಇಸಿಲ' ಎಂಬ ಪದದ ಅರ್ಥ ಕೋಟೆಯಿಂದ ಆವೃತವಾದ ಪಟ್ಟಣ. ಈ ಪದದಿಂದ ಕನ್ನಡ ಸಾಹಿತ್ಯದ ಚರಿತ್ರೆಯ ಸುಳಿವು ನಮಗೆ ದೊರಕುವುದು. ಈ ಹಲ್ಮಿಡಿ ಶಾಸನದಿಂದ ಹಿಡಿದು ಕ್ರಿ.ಶ. 814ರವರೆಗೆ ಕವಿರಾಜಮಾರ್ಗ ಕಾಲಾವಧಿಯ ನಡುವೆ ನಮ್ಮ ಕನ್ನಡ ಸಾಹಿತ್ಯದ ಬೆಳವಣಿಗೆ ಎನ್ನುವಂತದ್ದು. ಎಳೆಮಗುವಿನ ನಡಿಗೆಯ ರೂಪದಂತೆ ನಿಧಾನವಾಗಿ ತನ್ನ ಬೆಳವಣಿಗೆಯನ್ನು ಹೊಂದಲು ಪ್ರಾರಂಭಿಸಿತು. ಈ ಎರಡರ ಕಾಲ ಮಧ್ಯ ಸಾಹಿತ್ಯ ದಾಖಲಾಗದೆ ಬಡವಾಯಿತು ಎಂದು ಊಹಿಸಲು ಅವಕಾಶವಿದೆ.

ಕ್ರಿ.ಶ. 450ರ ಕಾಲಘಟ್ಟದಲ್ಲಿ ಕನ್ನಡ ಭಾಷೆಯ ಬೆಳವಣಿಗೆಗೆ ಸಂಬಂಧಿಸಿದಂತೆ ನಮಗೆ ಅನಿಸುವುದು ಇಷ್ಟೆ; ಈ ಹಲ್ಮಿಡಿ ಶಾಸನದ ರಚನೆಗೆ ಮುನ್ನ ಕನ್ನಡದಲ್ಲಿ ಸಾಕಷ್ಟು ಸಾಹಿತ್ಯ ಇದ್ದಿರಬಹುದು ಎಂಬುದು ಕೇವಲ ಊಹೆಮಾತ್ರ. ಏಕೆಂದರೆ ಲಿಖಿತ ಆಧಾರಗಳು ನಮಗೆ ಎಲ್ಲಿಯೂ ಲಭ್ಯವಾಗುವುದಿಲ್ಲ.

ಇದರಲ್ಲಿ ಕವಿರಾಜಮಾರ್ಗದಲ್ಲಿ ಕನ್ನಡ ಸಾಹಿತ್ಯ ಹೆಜ್ಜೆಗಳನ್ನು ಗಮನಿಸುವುದಾದರೆ ಇದು 9ನೇ ಶತಮಾನದ ರಾಷ್ಟ್ರಕೂಟರ ಕಾಲಕ್ಕೆ ಸೇರಿದ ಈ ಕೃತಿ ಕನ್ನಡದ ಮೊಟ್ಟಮೊದಲ ಗ್ರಂಥವಾಗಿದೆ. ಇದನ್ನು ರಚನೆ ಮಾಡಿದವರು ನೃಪತುಂಗನಿರಬಹುದು ಎಂಬ ಊಹೆ ಅಷ್ಟೆ. ಇದರ ಅರ್ಥ ಕವಿಗಳಿಗೆ ರಾಜನು ಮಾರ್ಗ ತೋರುವಂತೆ ಕವಿಗಳು ರಾಜರುಗಳ ಆಸ್ಥಾನದಲ್ಲಿ ಇರುವಾಗ ಕಾವ್ಯರಚನೆ ಮಾಡುವ ಬಗ್ಗೆ ಮಾಹಿತಿಯನ್ನು ತಿಳಿಸುತ್ತದೆ. ಕವಿಗಳು ಕಾವ್ಯವನ್ನು ರಚನೆ ಮಾಡಬೇಕಾದ ಸಂದರ್ಭದಲ್ಲಿ ಅನುಸರಿಸಬೇಕಾದ ಮಾರ್ಗಗಳು ಯಾವುವು? ಕಾವ್ಯ

ಎಂದರೆ ಯಾವುದು? ಅದು ಹೇಗೆ ಇರಬೇಕು? ಕಾವ್ಯದ ವಸ್ತು ಯಾವುದು? ಕಾವ್ಯದ ಸ್ವಾರಸ್ಯ ಎಲ್ಲಿದೆ? ಕಾವ್ಯದ ಗುಣ ಯಾವುದು? ಕಾವ್ಯದ ದೋಷ ಯಾವುದು? ಕಾವ್ಯದ ಉದ್ದೇಶ ಏನು? ಕಾವ್ಯದ ಪ್ರಯೋಜನ ಏನು? ಇನ್ನು ಮುಂತಾದ ಅಂಶಗಳನ್ನು ಕವಿಗಳಿಗೆ ತಿಳಿಸುವ ಲಕ್ಷಣಿಕ ಗ್ರಂಥವಾಗಿ ಹೊರಹೊಮ್ಮಿದ ಕನ್ನಡ ಸಾಹಿತ್ಯದ ಮೊಟ್ಟಮೊದಲ ಅಲಂಕಾರ ಶಾಸ್ತ್ರಗ್ರಂಥದಲ್ಲಿ ಈ ಮಾಹಿತಿ ನಮಗೆ ತಿಳಿಯುತ್ತದೆ. ಇದು ದಂಡಿ ಎನ್ನುವ ಸಂಸ್ಕೃತ ಕವಿಯ ಕಾವ್ಯದರ್ಶನದಿಂದ ಅನುವಾದಗೊಂಡಿದ್ದರೂ, ಇದರಲ್ಲಿ ಸ್ವಾತಂತ್ರ್ಯ ಅಂಶಗಳು ಇರುವುದನ್ನು ನಾವು ಗಮನಿಸಬಹುದು.

ಕವಿರಾಜಮಾರ್ಗದಲ್ಲಿ ಕನ್ನಡ ನಾಡಿನ ಇತಿಹಾಸ ಕನ್ನಡ ನಾಡಿನ ಜನರ ವ್ಯಕ್ತಿತ್ವ, ಗುಣ, ಬದುಕು. ನಾಡಿನ ಪೂರ್ವಪಶ್ಚಿಮ, ಉತ್ತರದಕ್ಷಿಣಗಳ ವಿಸ್ತಾರ, ಜನರ ಬದುಕಿನ ಆದರ್ಶತೆ ಮುಂತಾದ ಅಂಶಗಳನ್ನು ಕವಿರಾಜಮಾರ್ಗ ನಮಗೆ ತಿಳಿಸುತ್ತದೆ. ತಿರುಳ್ಗನ್ನಡದ ಸೀಮೆಯ ಸ್ಥಳಗಳಾದ ಕಿಸುವೊಳಲ್, ಕೊಪ್ಪಣನಗರ, ಪುಲಿಗೆರೆ ಮತ್ತು ಬಂಕಪುರ ಎಂಬ ಪ್ರಾಚೀನ ನಗರಗಳನ್ನು ಈ ಕೃತಿಯಲ್ಲಿ ಕವಿರಾಜಮಾರ್ಗದಲ್ಲಿ ಉಲ್ಲೇಖಿಸಿದ್ದಾನೆ. ಈ ನಗರಗಳು ಕ್ರಮವಾಗಿ ಪಟ್ಟದಕಲ್ಲು, ಕೊಪ್ಪಳ, ಲಕ್ಷ್ಮೇಶ್ವರ ಮತ್ತು ಒಕ್ಕಂದಗಳಾಗಿದ್ದು. ಈ ನಾಲ್ಕು ನಗರಗಳ ನಡುವಿನ ವಿಸ್ತಾರವಾದ ಭೂಪ್ರದೇಶದ ಸೀಮೆಯನ್ನು 'ತಿರುಳ್ಗನ್ನಡ ನಾಡು' ಎಂದು ಕರೆಯಲಾಗುವುದು. (ಪುಟ ಸಂಖ್ಯೆ: 4) ಈ ಕನ್ನಡ ಭಾಷೆಯನ್ನು ಮಾತನಾಡುವ ಜನರ ವ್ಯಕ್ತಿತ್ವ, ಸಾಹಸತೆ, ವಿನಯತೆ, ವಿಧೇಯತೆ, ಗುಣ, ಅಭಿಮಾನ ಇತ್ಯಾದಿ ಅಂಶಗಳನ್ನು ಕವಿರಾಜಮಾರ್ಗಕಾರ ಪ್ರಾಚೀನ ಕನ್ನಡ ನಾಡಿನ ಜನರ ಬಗ್ಗೆ ಒಳ್ಳೆಯ ಅಭಿಮಾನ ಇಟ್ಟುಕೊಂಡಿದ್ದರು. ಆದರೆ ಕವಿರಾಜಮಾರ್ಗಕಾರನ ನಂಬಿಕೆಗೆ ಆಧುನಿಕ ಕನ್ನಡಿಗರು ಅರ್ಹರಾಗಬೇಕಾದ ಕಾಲ ಇನ್ನೂ ಬರಬೇಕಾಗಿತ್ತಾದರೂ ಇಂದಿನ ಜನರ ಗುಣ ಸ್ವಭಾವಗಳ ವ್ಯತ್ಯಾಸ ಇರುವುದನ್ನು ನೆನಪು ಮಾಡಿಕೊಳ್ಳಬಹುದು.

ನಾವು ಪ್ರಾಚೀನ ಕನ್ನಡ ಸಾಹಿತ್ಯದ ಬೇರುಗಳನ್ನು ಗುರುತಿಸುವಾಗ ಇದರ ಮೂಲವನ್ನು ಕವಿರಾಜಮಾರ್ಗಕಾರನ ಕೃತಿಯಿಂದಲೇ ಕನ್ನಡ ಸಾಹಿತ್ಯ ಬೀಜಗಳನ್ನು ಗುರುತಿಸಬಹುದು ಅವುಗಳೆಂದರೆ ಚಿತ್ತಾಣ, ಬೆದಂಡೆ ಮತ್ತು ಪಗರಣ ಎಂಬ ನಾಟ್ಯಗಳ ಪ್ರಯೋಗವನ್ನು ಗುರುತಿಸಬಹುದು. ಇವು ಪ್ರಾಚೀನ ಸಾಹಿತ್ಯದ ರಚನೆಯ ರೂಪಗಳು ಅಥವಾ ರೀತಿಗಳು ಇವು ನಮಗೆ ಕನ್ನಡ ಸಾಹಿತ್ಯದಲ್ಲಿ ಸಿಕ್ಕ ಪ್ರಾರಂಭದ ಸಾಹಿತ್ಯ ರೂಪಗಳಾಗಿವೆ. ಚಿತ್ತಣ ಎಂಬುದರ ಮೂಲವನ್ನು ನಾವು ಯಕ್ಷಗಾನದಲ್ಲಿ ಉಲ್ಲೇಖಿತವಾಗಿರುವುದನ್ನು ಗಮನಿಸಬಹುದು. ಚಿತ್ತಣವು ಜನಪದರು ಬಿಡುವಿನ ಸಮಯದಲ್ಲಿ ಮನರಂಜನೆಗೋಸ್ಕರ ಬಯಲಾಟವನ್ನು ಆಡುತ್ತಿದ್ದರು ಎಂಬುದನ್ನು ಕ್ರಿ.ಶ. 814ರ ಪೂರ್ವದಿಂದ ಇಂತಹ ಕಲೆಯನ್ನು ಕನ್ನಡಿಗರು ಮೈಗೂಡಿಸಿಕೊಂಡಿದ್ದರು ಎನ್ನುವುದನ್ನು ನಾವು ಅರಿಯಲೇಬೇಕಾಗಿದೆ. ಚಿತ್ತಣದಲ್ಲಿ ತ್ರಿಪದಿ, ಚೌಪದಿ ಮುಂತಾದ

ರೂಪಗಳನ್ನು ವಿಫುಲವಾಗಿ ಬಳಸುತ್ತಿದ್ದರು ಎಂಬುದು ತಿಳಿದುಬರುತ್ತದೆ. ಇಂತಹ ಸಾಹಿತ್ಯ ರೂಪಗಳು ನಮ್ಮಲ್ಲೆ ಮೊದಲು ರಚನೆಯಾಗಿವೆ. ಇನ್ನು 'ಬೆದಂಡೆ'ಯ ಬಗ್ಗೆ ಹೇಳುವುದಾದರೆ, ಬೆದಂಡೆ ಎಂಬ ಸಾಹಿತ್ಯ ರೂಪ ಹಾಡುಗಬ್ಬಗಳ ಗುಂಪಿಗೆ ಸೇರುತ್ತದೆ. ಇದನ್ನು ಮೇಲ್ವಾಡು ಎಂಬ ಅರ್ಥದಲ್ಲಿ ಬಳಸುವುದನ್ನು ಹಲವು ವಿದ್ವಾಂಸರು ಪರಿಗಣಿಸಿದ್ದಾರೆ. ಇದನ್ನು ಅಕ್ಷರಗಣ, ಮಾತ್ರಾಗಣ ಮತ್ತು ಅಂಶಗಣ ಎಂಬ ಮೂರು ಬಗೆಗಳನ್ನು ಒಳಗೊಂಡಿರುವ ಅಪರೂಪದ ಸಾಹಿತ್ಯ ಪ್ರಕಾರ ಎಂದು ಕನ್ನಡ ನಾಡಿನ ಹಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಇದನ್ನು ಸಂಕೇತದ ನೆಲೆಯಲ್ಲಿ ಗುರುತಿಸಬಹುದು. ದೇಸಿವಾದ್ಯಗಳ ಹಿನ್ನೆಲೆಯಲ್ಲಿ ಇದನ್ನು ಅಂದಿನ ಜನಪದರು ಹಾಡುತ್ತಿದ್ದರು ಎಂಬ ಊಹೆಗೆ ನೈಜ ಸ್ವರೂಪದಂತಿದೆ. ಆದ್ದರಿಂದ ಬೆದಂಡೆಯು ಚಂಪೂಗಿಂತ ಪ್ರಾಚೀನವಾದ ರೂಪವೆಂದು ತೋರುತ್ತದೆ. ಇವು ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳ ಬೀಜಗಳು.

ಕವಿರಾಜಮಾರ್ಗದಿಂದ ಪಂಪನ ಕಾಲಾವಧಿಯವರೆಗೆ ಯಾವ ಸಾಹಿತ್ಯದ ಪ್ರಕಾರದ ಕೃತಿಗಳು ನಮಗೆ ಲಭ್ಯವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಪಂಪನ 'ವಿಕ್ರಮಾರ್ಜುನ ವಿಜಯ' ಮತ್ತು 'ಆದಿಪುರಾಣ'ಗಳು ನಮಗೆ ಮೊದಲನೆಯ ಕಾವ್ಯಗಳಾಗಿ ಕಂಡುಬರುತ್ತವೆ. ಹೀಗಾಗಿ ಪಂಪ ನಮಗೆ ಆದಿಕವಿಯಾಗಿ ಗೋಚರವಾಗುತ್ತಾನೆ. ಕವಿರಾಜಮಾರ್ಗ ಮತ್ತು ಆದಿಪುರಾಣದ ಕಾವ್ಯಮಾರ್ಗದ ನಡುವೆ ಸುಮಾರು ಸಾಹಿತ್ಯಕಾರರು ಸಾಹಿತ್ಯ ರಚನೆ ಮಾಡಿದ್ದರೂ ಅವುಗಳು ನಮಗೆ ಸಿಗುವುದಿಲ್ಲ. ಕಾರಣ ಇಷ್ಟೇ ಇರಬಹುದು ಎಂದು ಊಹಿಸಲು ಇಲ್ಲಿ ಅವಕಾಶವಿದೆ. ಧರ್ಮದ ಪ್ರಭಾವದಿಂದ ಆದಿ ಕಾಲದ ಸಾಹಿತ್ಯ ಕೃತಿಗಳು ನಮಗೆ ಲಭ್ಯವಾಗದಿರಬಹುದು. ಹಾಗಾಗಿ ಪಂಪನ ಕಾಲವೇ ಕನ್ನಡ ಸಾಹಿತ್ಯದ ಬೆಳ್ಳಂಬೆಳಗಿನ ಕಾಲವಾಗಿರುತ್ತದೆ. ಕಾಲಾನಂತರ ಕನ್ನಡ ಸಾಹಿತ್ಯದಲ್ಲಿ ಮತಧರ್ಮಗಳ ಪ್ರಭಾವ ಕಂಡುಬರುತ್ತದೆ. ಜೈನ ಧರ್ಮ, ವೀರಶೈವ ಧರ್ಮ, ವೈಷ್ಣವ ಧರ್ಮ ಉದಯದ ಜೊತೆಗೆ ಸಾಹಿತ್ಯವು ತನ್ನ ಹಲವು ಘಟ್ಟಗಳಾಗಿ ರಚನೆ ಆಗುತ್ತದೆ. ಅಂದಿನ ಸಾಹಿತ್ಯ ಚರಿತ್ರೆಯನ್ನು ಜೈನಯುಗ, ವೀರಶೈವಯುಗ, ವೈಷ್ಣವಯುಗ ಕನ್ನಡ ಸಾಹಿತ್ಯವನ್ನು ಬೆನ್ನತ್ತಿ ಬೆಳೆದು ಸಾಗಿದ ದಾಖಲೆಗಳು ನಮಗೆ ತಿಳಿಯುತ್ತದೆ. ಈ ಕಾಲದಲ್ಲಿ ಚಂಪೂ ಎಂಬ ಪದ್ಯಗದ್ಯ ಮಿಶ್ರಿತ ಸಾಹಿತ್ಯ ರೂಪ ಹುಟ್ಟಿಕೊಂಡಿತ್ತು. ಇಲ್ಲಿ ಸಂಪೂರ್ಣವಾಗಿ ಪದ್ಯದಿಂದ ಸಾಹಿತ್ಯವನ್ನು ಹಿಡಿದಿಡುವ ಕೆಲಸ ಮಾಡಿದೆ. ಇತ್ತ ಗದ್ಯದಿಂದ ಸಾಹಿತ್ಯ ಹಿಡಿದಿಡುವ ಕೆಲಸ ಮಾಡದೆ ಸಮ್ಮಿಶ್ರವಾಗಿ ಗದ್ಯ ಮತ್ತು ಪದ್ಯದ ಸಮ್ಮಿಶ್ರಣದಿಂದ ಚಂಪೂ ಸಾಹಿತ್ಯ ಉದಯವಾಗಲಿಕ್ಕೆ ಕಾರಣವಾಯಿತು.

ಪ್ರಾಚೀನ ಕಾಲದಲ್ಲಿ ಕವಿಯಾದವನು ಸಾಹಿತ್ಯವನ್ನು ಬರೆಯುವುದೇ ದೊಡ್ಡ ಪ್ರಯಾಸದ ಕೆಲಸವಾಗಿತ್ತು ಏಕೆಂದರೆ ಹೀಗಿರುವ ಸೌಲಭ್ಯಗಳಾದ ಪೆನ್, ಪೇಪರ್

(ಕಾಗದ), ಮೊಬೈಲ್, ಲ್ಯಾಪ್‌ಟಾಪ್, ಕಂಪ್ಯೂಟರ್ ಇತ್ಯಾದಿ ಆಧುನಿಕ ತಂತ್ರಜ್ಞಾನಗಳು ಇಲ್ಲದ ಸಂದರ್ಭದಲ್ಲಿ ಕವಿ ತನ್ನ ಭಾವನೆಗಳನ್ನು, ಅನಿಸಿಕೆಗಳನ್ನು ತನ್ನ ಅಭಿಪ್ರಾಯಗಳನ್ನು ಮೊದಲು ಮರಳು ಅಥವಾ ಮಣ್ಣಿನ ಮೇಲೆ ಬರೆಯುತ್ತಿದ್ದರು ಆನಂತರ ಹಲಗೆಯ ಮೇಲೆ ಬಳಪದಿಂದ ಬರೆದು ಅನಂತರ ತಾಳೆಗರಿಗಳನ್ನು ಹದಮಾಡಿದ ನಂತರ ಅವುಗಳ ಮೇಲೆ ಕೊರೆಯಬೇಕಾಗಿತ್ತು. ಅಷ್ಟೇ ಅಲ್ಲದೆ ಬರವಣಿಗೆಯನ್ನು ಆಯ್ದುಕೊಂಡ ನಂತರ ಒಂದು ನಿರ್ದಿಷ್ಟವಾದ ಯಾವುದಾದರೂ ಛಂದೋ ರೂಪದ ವೃತ್ತವೋ ಷಟ್ಪದಿ ಅಥವಾ ಕಂದ ಯಾವುದಾದರೂ ಒಂದು ನಿಯಮದೊಳಗೆ ಸಾಹಿತ್ಯವನ್ನು ಬರೆಯಬೇಕಾಗಿತ್ತು. ಇದು ಅಷ್ಟು ಸುಲಭವಾಗಿ ಬರೆಯುವ ಕೆಲಸವಾಗಿರಲಿಲ್ಲ. ಕವಿಯಾದವನು ಹಾಗೋ ಹೀಗೋ ಏನಾದರೂ ಮಾಡಿ ಬರೆದರು ಅಂದಿನ ಪ್ರಚಲಿತ ಕಲ್ಪನೆಗೆ ಅನುಗುಣವಾಗಿ ಅಷ್ಟಾದಶವರ್ಣನೆಗಳ ಕಟ್ಟುಪಾಡುಗಳನ್ನು ಅನುಸರಿಸಿ ಕವಿಯಾದವನು ಸಾಹಿತ್ಯ ರಚನೆ ಮಾಡಬೇಕಾಗಿತ್ತು. ಅಂತಹ ಅಷ್ಟಾದಶವರ್ಣನೆಗಳಾದ ಸಮುದ್ರದ ವರ್ಣನೆ, ಸೂರ್ಯ ಉದಯ, ಚಂದ್ರೋದಯ, ನಗರವರ್ಣನೆ, ಜಲಕ್ರೀಡೆ ಇನ್ನು ಮುಂತಾದ 18 ವರ್ಣನೆಗಳಿಗೆ ಅನುಗುಣವಾಗಿ ಪ್ರಾಚೀನ ಕವಿಗಳು ಕಾವ್ಯಗಳನ್ನು ಬರೆಯಬೇಕಾಗಿತ್ತು. ಇಲ್ಲಿ ಕವಿಯಾದವನು ಸಮುದ್ರವನ್ನು ನೋಡಲಿ ನೋಡದೇ ಇರಲಿ ವಸ್ತುವನ್ನು ಅನುಭವಿಸಲಿ ಅನುಭವಿಸದೇ ಇರಲಿ ಅಂದಿನ ಕವಿ ಶಾಸ್ತ್ರಕ್ಕೆ ಅನುಗುಣವಾಗಿ ಬರೆಯಲೇಬೇಕಾದ ನಿಯಮವೊಂದಿತ್ತು. ಹೀಗೆ ಕವಿಯಾದವನು ಕಷ್ಟಪಟ್ಟು ಬರೆದರೂ ಕೃತಿ ಪ್ರಕಟಿಸುವುದು ಮತ್ತು ಓದುಗರ ಕೈಗೆ ಸೇರಿಸುವುದು ಇನ್ನೂ ಕಠಿಣವಾದ ಕೆಲಸವಾಗಿತ್ತು. ಕಾರಣ ಸಂಸ್ಕೃತ ಭಾಷೆ ಬಹುಹಿಷ್ಠ ಭಾಷೆ ಆಗಿತ್ತು. ಈ ಸಂಸ್ಕೃತ ಭಾಷೆ ಜನಸಾಮಾನ್ಯರಿಗೆ ಅರ್ಥವಾಗುತ್ತಿರಲಿಲ್ಲ ಆದರೂ ಸಾಹಿತ್ಯ ಆಸಕ್ತಿ ಹೊಂದಿರುವ ಕೆಲವು ಸಹೃದಯದವರು ಮಾತ್ರ ಕಾವ್ಯವನ್ನು ಓದುತ್ತಿದ್ದರು ಆದರೆ ಜನಸಾಮಾನ್ಯರಿಗೆ ಇದು ಕಷ್ಟದ ಕೆಲಸವಾಗಿತ್ತು. ಏಕೆಂದರೆ ಸಾಮಾನ್ಯರಿಗೆ ಸಂಸ್ಕೃತ ಭಾಷೆ ಕಷ್ಟವಾಗಿರುವುದರಿಂದ ಇದು ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಿದಂತಾಗಿತ್ತು. ಹಾಗಾಗಿ ವಿದ್ವಾಂಸರೇ ಓದಿ ಮೆಚ್ಚಬೇಕಾಗಿತ್ತು. ಮುಂದೆ ಸಂಸ್ಕೃತದಿಂದ ನಿಧಾನವಾಗಿ ಸಾಹಿತ್ಯದ ಭಾಷೆ ಎನ್ನುವುದು ಸಂಸ್ಕೃತದಿಂದ 12ನೇ ಶತಮಾನಕ್ಕೆ ಶಿವಶರಣರ ಕೈಗೆ ಸಿಕ್ಕಿ ಇದರ ರೂಪ ಮತ್ತು ಹೆಜ್ಜೆಗಳು ಸ್ವಲ್ಪ ಬದಲಾಗುವಂತೆ ಸಾಗಿದವು. ಸಂಸ್ಕೃತದಿಂದ ನಿಧಾನವಾಗಿ ಜನಸಾಮಾನ್ಯರ ಭಾಷೆಯಲ್ಲಿ ಸರಳವೂ ಸುಲಭವೂ ಆದ ದಿನನಿತ್ಯದ ಭಾಷೆಯಲ್ಲಿ ಸಾಹಿತ್ಯ ರಚನೆ ಮಾಡಲು ಪ್ರಾರಂಭಿಸಿದರು. ಇದು ವಚನಕಾರರಿಂದ ಸಾಧ್ಯವಾಯಿತು. 'ವಚನ' ಎಂಬ ಸಾಹಿತ್ಯ ತ್ವರಿತಗತಿಯಲ್ಲಿ ಪ್ರಸಾರವಾಗಲು 12ನೇ ಶತಮಾನದ ಕಾಲದಲ್ಲಿ ಸಾಧ್ಯವಾಯಿತು. ಇದು ತ್ವರಿತಗತಿಯಲ್ಲಿ ಪ್ರಚಾರವಾಗಲು ಪ್ರಮುಖ ಕಾರಣವೆಂದರೆ ಜನಸಾಮಾನ್ಯರು ಮಾತನಾಡುವ ಧಾಟಿಯಲ್ಲಿ ಜನರಿಗೆ ಅರ್ಥವಾಗುವಂಥಹ

ರೀತಿಯಲ್ಲಿ ಬರೆಯುವುದರಿಂದ ಅಂದಿನ ಕಾಲದ ಸಾಹಿತ್ಯ ಬೆಳವಣಿಗೆಗೆ ಸಹಾಯವಾಯಿತು. ಅಲ್ಲಿಂದ ಕನ್ನಡ ಸಾಹಿತ್ಯದ ಹೆಜ್ಜೆಯ ಗುರುತು ರಗಳೆಯಾಗಿ, ಷಟ್ಪದಿಯಾಗಿ, ಚಂಪೂಸಾಹಿತ್ಯವಾಗಿ, ತ್ರಿಪದಿಯಾಗಿ ತನ್ನ ಗಾತ್ರದ ರೂಪವನ್ನು ಕಾಲಕಳೆದಂತೆಲ್ಲ ಬದಲಾಯಿಸಿಕೊಳ್ಳಲು ಪ್ರಾರಂಭಿಸಿತು.

ಕನ್ನಡ ಸಾಹಿತ್ಯದ ಆಧುನಿಕ ಕಾಲಕ್ಕಿಂತ ಪ್ರಾಚೀನ ಕನ್ನಡ ಸಾಹಿತ್ಯದ ಕಾಲವನ್ನು ನಾವು ಸಾಹಿತ್ಯದ ವಿವಿಧ ಹೆಜ್ಜೆಯ ರೂಪಗಳನ್ನು ನಾವು ಈ ರೀತಿಯ ವಿಭಾಗಕ್ರಮವಾಗಿ ವಿಭಾಗಿಸಿ ನೋಡಬಹುದು. ಕಾವ್ಯದ ಛಂದೋರೂಪಗಳಲ್ಲಿ ಮತ್ತು ಭಾಷಾ ರೂಪಗಳಲ್ಲಿ ಇವುಗಳನ್ನು ಅನುಕ್ರಮವಾಗಿ ಚಂಪೂ ಸಾಹಿತ್ಯ, ವಚನ ಸಾಹಿತ್ಯ, ರಗಳೆ ಸಾಹಿತ್ಯ, ಷಟ್ಪದಿ ಸಾಹಿತ್ಯ, ಕೀರ್ತನೆ ಸಾಹಿತ್ಯ, ತ್ರಿಪದಿ ಸಾಹಿತ್ಯ, ಸಾಂಗತ್ಯ ಸಾಹಿತ್ಯ ಹಾಗೂ ಭಾವಗೀತೆ ಮತ್ತು ಗದ್ಯಸಾಹಿತ್ಯ ಎಂದು ಹಲವು ಭಾಗಗಳಾಗಿ ವಿಂಗಡಿಸಿ ಪ್ರಾಚೀನದಿಂದ ಹಿಡಿದು ಆಧುನಿಕ ಸಾಹಿತ್ಯದ ಕಾಲಘಟ್ಟದವರೆಗೆ ಕನ್ನಡ ಸಾಹಿತ್ಯ ಬೆಳವಣಿಗೆಯನ್ನು ಈ ರೀತಿಯಾಗಿ ವಿಂಗಡಿಸಬಹುದು.

ಮೊದಲನೆಯದಾಗಿ 'ಚಂಪೂ' ಸಾಹಿತ್ಯದ ಹೆಜ್ಜೆಗಳನ್ನು ಗಮನಿಸುವುದಾದರೆ 'ಚಂಪೂ' ಎಂದರೆ ಗದ್ಯಪದ್ಯ ಒಂದುಗೂಡಿ ರಚಿಸಿದ ಪ್ರೌಢವಾದ ಬರವಣಿಗೆಯಾಗಿದೆ. ಇದು 19ನೇ ಶತಮಾನದಲ್ಲಿ ಕನ್ನಡ ಸಾಹಿತ್ಯದಲ್ಲಿ ಮೊಟ್ಟಮೊದಲು ತನ್ನ ಹೆಜ್ಜೆಯನ್ನು ಪಂಪ, ರನ್ನ ಮುಂತಾದ ಕವಿಗಳ ಮೂಲಕ ರಚನೆಗೊಂಡಿತು. ಇದು ಪಂಪನಿಂದ ಆರಂಭವಾದ ಕಾವ್ಯ ಪ್ರಕಾರ ಮುಂದೆ ತನ್ನ ವಿಸ್ತಾರವನ್ನು ಅನೇಕ ಕವಿಗಳಿಂದ ಬಿತ್ತರಿಸಿಕೊಂಡಿತು. ಇದು ಸುಮಾರು 14ನೇ ಶತಮಾನದವರೆಗೆ ಅನೇಕ ಕನ್ನಡ ಕವಿಗಳಿಂದ ರಚಿಸಿಕೊಂಡಿತು. ಉದಾ: ಪಂಪ, ರನ್ನ, ನಾಗವರ್ಮ, ರುದ್ರಭಟ್ಟ, ನೇಮಿಚಂದ್ರ, ನಯಸೇನ, ಆಂಡಯ್ಯ, ನಾಗಚಂದ್ರ, ಜನ್ನ, ಹರಿಹರ, ಷಡಾಕ್ಷರ ಇನ್ನೂ ಮುಂತಾದ ಕವಿಗಳ ಗುಂಪು ಇದೆ. ಇವರೆಲ್ಲರ ಕೈಯಿಂದ ಚಂಪೂ ಎಂಬ ಮರವು ಬೆಳೆದು, ಮುಂದೆ ತನ್ನ ರೂಪವನ್ನು ಬದಲಿಸಿತು.

ಕನ್ನಡ ಸಾಹಿತ್ಯದಲ್ಲಿ ಪಂಪನ ನಂತರ 1213ನೇ ಶತಮಾನದಲ್ಲಿ ವಚನ, ರಗಳೆ, ಷಟ್ಪದಿಗಳ ರೂಪವಾಗಿ ತನ್ನ ಹೆಜ್ಜೆಯ ಗುರುತುಗಳನ್ನು ಬದಲಾಯಿಸಿತು. ಈ ಕಾಲದಲ್ಲಿ ಸಾಹಿತ್ಯವು ರಾಜಾಶ್ರಯದ ಮುಲಾಜನ್ನು ತಿರಸ್ಕರಿಸಿತು. ಸಂಸ್ಕೃತವು ಕನ್ನಡದ ಮೇಲಿನ ದಟ್ಟ ಪ್ರಭಾವವನ್ನು ತಪ್ಪಿಸಿಕೊಂಡು ಸ್ವತಂತ್ರವಾಗಿ ಬೆಳೆಯಲು ಪ್ರಾರಂಭಿಸಿತು. ಸರಳವಾದ ಸುಲಭವಾದ ಸುಲಲಿತವಾದ ಆಡುಮಾತಿನ ಧಾಟಿಯಲ್ಲಿ ವಚನಸಾಹಿತ್ಯ ಪ್ರಾರಂಭವಾಯಿತು. ವಚನ ಎಂದರೆ ಮಾತನಾಡು, ವಾಗ್ದಾನ ನೀಡು ಎಂದು ಅರ್ಥ. ಬಸವಾದಿ ಶರಣರಲ್ಲಿ ನಡೆದ ಅಂದಿನ ಸಾಮಾಜಿಕಧಾರ್ಮಿಕ ಕ್ರಾಂತಿಯ ಸಂದರ್ಭದಲ್ಲಿ ಕನ್ನಡ ಸಾಹಿತ್ಯದಲ್ಲಿ ವಚನ ಎಂಬ ರೂಪವು ಉಗಮವಾಗಲು ಪ್ರಾರಂಭಿಸಿತು.

ವಚನಕಾರರು ನೇರವಾದ ನುಡಿಯಲ್ಲಿ ತಮಗೆ ಅನಿಸಿದ ಅನುಭವದ ಮಾತನ್ನು ಹೇಳಿ ಸಾಮಾಜಿಕ ವಿಮರ್ಶೆಯನ್ನು ಮಾಡಿದರು. ಈ ಸಾಹಿತ್ಯ ಪ್ರಕಾರ ಕನ್ನಡ ಸಾಹಿತ್ಯದ ಇತಿಹಾಸದಲ್ಲೇ ತ್ವರಿತಗತಿಯಲ್ಲಿ ಬೆಳೆಯಲು ಪ್ರಾರಂಭಿಸಿತು. ಈ ಕಾಲಘಟ್ಟದಲ್ಲಿ ಮಹಿಳೆಯರು ಸಹ ಸಾಹಿತ್ಯ ಕೃಷಿಗೆ ಶ್ರಮಿಸಿದರು. ಅನೇಕರು ಲಿಂಗ ಬೇಧ, ಜಾತಿ ಬೇಧವಿಲ್ಲದೆ ಸಾಹಿತ್ಯ ರಚನೆಗೆ ಮುಂದಾದರು. ಇವರಲ್ಲಿ ಸಾಮಾನ್ಯರು ಒಳಗೊಂಡಿದ್ದರು. ಇವರೆಲ್ಲರ ಕೈಗೆ ಸಿಕ್ಕದ ವಚನಸಾಹಿತ್ಯ ವಿಸ್ತಾರವಾಗಿ ಬೆಳೆಯಲು ಪ್ರಾರಂಭಿಸಿತು.

ಈ ಸಮೃದ್ಧವಾದ ವಚನ ಸಾಹಿತ್ಯದ ನಂತರ ಹುಟ್ಟಿದ ಸಾಹಿತ್ಯ ಪ್ರಕಾರವೇ ರಗಳೆ ಮತ್ತು ಷಟ್ಪದಿ ಸಾಹಿತ್ಯವಾಗಿದೆ. ಇದು ಕ್ರಾಂತಿಯ ಘಟ್ಟದ ಕಾಲವೇ ಸರಿ. ಇದು ಕಥನ ಕಾವ್ಯಗಳಿಗೆ ಮಾಧ್ಯಮವನ್ನಾಗಿ ಮಾಡಿಕೊಂಡ ಛಂದಸ್ಸಿನ ಒಂದು ಸಾಹಿತ್ಯದ ರೂಪವಾಗಿದೆ. ಹರಿಹರನಿಂದ ಹುಟ್ಟಿಕೊಂಡ ರಗಳೆಯು ವಿಶಿಷ್ಟವಾದ ಜಾಡುಹಿಡಿಯಿತು. ಈ ಪ್ರಕಾರವು ನಿಷ್ಠೆಯಿಂದ ಶಿವನನ್ನು ಮತ್ತು ಶಿವ ಭಕ್ತರ ಮೇಲೆ ಚರಿತ್ರೆಬರೆಯಲು ಪ್ರಮಾಣಮಾಡಿತು. ಶಿವನನ್ನು ಮತ್ತು ಶಿವಭಕ್ತರ ಚರಿತ್ರೆ ರಚಿಸಲು ಸರಿಯಾದ ಮಾರ್ಗ ಎಂದು ತಿಳಿದ ಹರಿಹರ ಸಾಹಿತ್ಯದ ಹೆಜ್ಜೆಯನ್ನು ಬದಲಾಯಿಸಿ ಸಾಹಿತ್ಯ ಕೃಷಿಗೈದನು. ಹರಿಹರನನ್ನು ರಗಳೆಕವಿ ಎಂದು ಆ ಕಾಲಘಟ್ಟದಲ್ಲಿ ಅಪಹಾಸ್ಯ ಮಾಡಿರುವ ಪರಿಣಾಮವಾಗಿ ಗಿರಿಜಾಕಲ್ಯಾಣ ಎಂಬ ಚಂಪೂ ಕಾವ್ಯವನ್ನು ರಚಿಸಿ ಪ್ರಸಿದ್ಧನಾದ ಹರಿಹರ ಒಬ್ಬ ಶಿವಕವಿಯಾಗಿ ಗುರುತಿಸಿಕೊಂಡನು.

ಹೀಗೆ ರಗಳೆ ಸಾಹಿತ್ಯ ದೊಡ್ಡ ಕ್ರಾಂತಿಯನ್ನುಂಟುಮಾಡಿದ ನಂತರ ಮತ್ತೊಂದು ಕನ್ನಡ ಸಾಹಿತ್ಯದ ಬೀಜ ಹುಟ್ಟಲು ಪ್ರಾರಂಭಿಸಿತು, ಅದಾವುದೆಂದರೆ ಷಟ್ಪದಿ ಇದು ಕನ್ನಡ ಸಾಹಿತ್ಯದಲ್ಲಿ ರಾಘವಾಂಕನಿಂದ ಹೆಜ್ಜೆಯನ್ನು ಇಡಲು ಪ್ರಾರಂಭಿಸಿ 1417ನೇ ಶತಮಾನದವರೆಗೆ ನಡೆಯಿತು. ಷಟ್ಪದಿ ಎಂದರೆ ಆರು ಸಾಲಿನ ರೂಪದ ನಡಿಗೆಯಾಗಿದೆ. ರಾಘವಾಂಕ ಷಟ್ಪದಿ ಪ್ರಕಾರಗಳಲ್ಲಿ ವಿಶೇಷವಾಗಿ ವಾರ್ಧಕ ಷಟ್ಪದಿಯನ್ನು ಬಳಸಿದ್ದಾನೆ. ಉದಾ: ಹರಿಶ್ಚಂದ್ರ ಕಾವ್ಯ, ಸಿದ್ಧರಾಮ ಚರಿತ್ರೆ, ಸೋಮನಾಥ ಚರಿತ್ರೆ ಮುಂತಾದ ಕಾವ್ಯಗಳನ್ನು ವಾರ್ಧಕ ಷಟ್ಪದಿಯಿಂದ ರಚನೆ ಮಾಡಿದ್ದಾನೆ. ಅಲ್ಲದೆ ಉದ್ದಂಡ ಷಟ್ಪದಿ ಎಂಬ ಹೊಸ ಹೆಜ್ಜೆಯನಿಡಲು ರಾಘವಾಂಕ ಮುಂದಾಗಿದ್ದಾನೆ. ಇದು ಕನ್ನಡ ಸಾಹಿತ್ಯದ ಹೊಸ ಆವಿಷ್ಕಾರವಾಗಿ ಮೂಡಿಬಂದಿದ್ದು ತುಂಬಾ ವಿಶೇಷವಾಗಿದೆ.

ನಂತರದ ಕೀರ್ತನೆ ಸಾಹಿತ್ಯದ ರೂಪ ಕನ್ನಡ ಸಾಹಿತ್ಯದಲ್ಲಿ 1517ನೇ ಶತಮಾನದವರೆಗೆ ಬೆಳವಣಿಗೆ ಕಂಡಿತು ಇದರ ಭಾವನೆ, ಭಾಷೆ ತುಂಬಾ ಮೃದುವಾದದ್ದು. ಅಂತರಂಗದ ಮಿದುವಾದ, ಹದವಾದ ಭಾವನೆಗಳನ್ನು ವ್ಯಕ್ತಪಡಿಸಲು ಹೆಚ್ಚು ಅನುಕೂಲವಾದ ಮಾಧ್ಯಮ ಇದಾಗಿದೆ. 'ಕೀರ್ತನೆ' ಎಂದರೆ

ಭಗವಂತನ ಲೀಲೆಯನ್ನು ಕುರಿತು ಹಾಡಿಹೊಗಳುವುದು ಎಂದರ್ಥ. (ಪುಟ ಸಂಖ್ಯೆ: 22) ಇದೊಂದು ವೈಷ್ಣವಭಕ್ತಿ ಪರಂಪರೆಯನ್ನು ಕೀರ್ತನಾ ಸಾಹಿತ್ಯವು ಪ್ರಚಾರಪಡಿಸಿತು. ರಾಮಾನುಜಾಚಾರ್ಯರಿಂದ ಹಿಡಿದು ಅನೇಕ ಕೀರ್ತನಕಾರರ ಕೈಗೆ ಸಿಕ್ಕಿ ಈ ಸಾಹಿತ್ಯ ಪ್ರಕಾರವು ತನ್ನದೇ ಆದ ಸ್ವರೂಪವನ್ನು ಪಡೆದು ಹೆಜ್ಜೆ ಇಡುತ್ತಾ ಸುಮಾರು 17ನೇ ಶತಮಾನದವರೆಗೆ ಸಾಗಿತು. ಹರಿದಾಸ ಸಾಹಿತ್ಯ ಕೀರ್ತನೆಗಳು ಹುಟ್ಟಿಕೊಂಡಿದ್ದು ಹಾಡಾಗಿ. ಇದು ಪಲ್ಲವಿ ಅನುಪಲ್ಲವಿ ಅನಂತರ ನಾಲ್ಕು ಪಾದಗಳ ಕೆಲವು ಪದ್ಯಗಳ ಮುಖಾಂತರ ಇದು ಕೀರ್ತನೆಯ ರೂಪವಾಗಿ ಬೆಳೆದು ತನ್ನದೇ ಆದ ಚರಿತ್ರೆಯನ್ನು ಕನ್ನಡ ಸಾಹಿತ್ಯದಲ್ಲಿ ಉಂಟುಮಾಡಿದೆ.

ತ್ರಿಪದಿಸಾಂಗತ್ಯಗಳು ಕನ್ನಡ ಸಾಹಿತ್ಯದಲ್ಲಿ ವಿಶೇಷ ಹೆಜ್ಜೆಯನ್ನಿಡುತ್ತ ಸಾಗಿರುವುದು ಕಂಡುಬರುತ್ತದೆ. ತ್ರಿಪದಿ ಕನ್ನಡ ಸಾಹಿತ್ಯದ ರೂಪಗಳಲ್ಲಿ ಅತ್ಯಂತ ಹಳೆಯ ಸಾಹಿತ್ಯ ರೂಪವಾಗಿದೆ. ತ್ರಿಪದಿ ಸರ್ವಜ್ಞನಿಂದ ರಚನೆಯಾದರೆ ಸಾಂಗತ್ಯ ರತ್ನಕರವರ್ಣಿಯಿಂದ ರಚನೆಯಾಗಿದೆ. ತ್ರಿಪದಿ ಕನ್ನಡ ಸಾಹಿತ್ಯ ರೂಪಗಳಲ್ಲಿ ಅತ್ಯಂತ ಹಳೆಯ ಹೆಜ್ಜೆಗಳನ್ನು ನಾವು ಇಲ್ಲಿ ಸ್ಮರಿಸಬಹುದು. ಕ್ರಿ.ಶ. 700ರ ಬಾದಾಮಿಯ ಕಪ್ಪೆ ಆರಭಟನ ಶಾಸನದಲ್ಲಿ ಆರಭಟನ ವ್ಯಕ್ತಿತ್ವವನ್ನು ತಿಳಿಸುವ ಅತ್ಯಂತ ಪ್ರಾಚೀನ ಸಾಹಿತ್ಯ ರೂಪವಾಗಿದೆ. ಹಳ್ಳಿಯ ಅಥವಾ ಗ್ರಾಮೀಣ ಹಾಡುಗಳೆಂದೇ ಕರೆಯುವ ಜನಪದ ಸಾಹಿತ್ಯದಲ್ಲಿ ತ್ರಿಪದಿಯ ರೂಪ ತುಂಬಾ ವಿಶೇಷವಾಗಿದೆ. ಇದು ಮೂರು ಸಾಲಿನ ಪದ್ಯವಾಗಿದ್ದು, ನೆನಪಿಡಲು ಅತ್ಯಂತ ಸುಲಭವೂ ಆಗಿರುವ ಸಾಹಿತ್ಯದ ಬಂಧವಾಗಿದೆ.

ಸಾಂಗತ್ಯವು ತ್ರಿಪದಿಗಿಂತ ಹೆಚ್ಚು ಕವಿಪ್ರಿಯ ಮತ್ತು ಜನಪ್ರಿಯವಾದ ಸಾಹಿತ್ಯ ರೂಪಕವಾಗಿ ಹೊರಹೊಮ್ಮಿದೆ. ಇದು ತ್ರಿಪದಿಯಷ್ಟು ಹೆಚ್ಚು ಪ್ರಾಚೀನ ರೂಪವಲ್ಲ ತ್ರಿಪದಿ ಸುಮಾರು 7ನೇ ಶತಮಾನದಷ್ಟು ಹಳೆಯದಾದರೆ ಸಾಂಗತ್ಯ ಕ್ರಿ.ಶ. 15ನೇ ಶತಮಾನದಷ್ಟು ಹಳೆಯದರ ಕೃತಿಯಾಗಿದೆ. ರೂಪವನ್ನು ಕಾವ್ಯಕ್ಕೆ ಬಳಸಿದ ಕವಿಗಳ ಸಂಖ್ಯೆಯು ಮಿಗಿಲಾದದ್ದು ಇದೊಂದು ರೀತಿ ಹಾಡುಗಬ್ಬವಾಗಿ ಬೆಳೆದಿರುವ ಸಾಹಿತ್ಯ ರೂಪವಾಗಿದೆ. ಇದನ್ನು ಪ್ರಾರಂಭದಲ್ಲಿ ಶಿಶುಮಾಯಣ, ಕನಕದಾಸ, ನಂಜುಂಡ, ರತ್ನಕರವರ್ಣಿ ಇವರೇ ಪ್ರಮುಖ ಸಾಂಗತ್ಯ ಕೃತಿಕಾರರಾಗಿದ್ದರೆ. ರತ್ನಕರವರ್ಣಿ ಶೃಂಗಾರಕವಿ ಎಂದೇ ಪ್ರಸಿದ್ಧನಾಗಿದ್ದಾನೆ. ಇವನು ನಂತರ ಅನೇಕ ಸಾಹಿತ್ಯಗಳ ಕೈಗೆ ಸಾಂಗತ್ಯ ಎಂಬ ಪ್ರಕಾರ ಸಿಕ್ಕಿ ತನ್ನ ನಡಿಗೆಯನ್ನು ಇನ್ನೂ ಬಹುದೂರ ಸಾಗಿಸಿದ ಅನೇಕ ಕವಿಗಳ ದಂಡೆ ಇದೆ.

ಗದ್ಯ ಮತ್ತು ಪದ್ಯ(ಭಾವಗೀತೆಗಳ) ಕಾಲ ಸಾಂಗತ್ಯದ ಕಾಲಾನಂತರದಲ್ಲಿ ರೂಪಗೊಂಡ ಸಾಹಿತ್ಯ ಪ್ರಕಾರವಾಗಿದೆ. ಇವುಗಳು ಹೊಸಗನ್ನಡ ಸಾಹಿತ್ಯ ರೂಪಗಳಾಗಿ ಹೊರಹೊಮ್ಮಿವೆ. ಆದರೂ ಗದ್ಯವು ಕನ್ನಡ ಸಾಹಿತ್ಯದ 8ನೇ ಶತಮಾನಕ್ಕೂ ಹಿಂದೆ ಇತ್ತೆಂದು ತಿಳಿದುಬರುತ್ತದೆ. ಇದು ಶಿವಕೊಟ್ಯಾಚಾರ್ಯನ ವಡ್ಡಾರಾಧನೆಯಿಂದ

ಪ್ರಾರಂಭವಾಗಿ ಮುದ್ದನಾನವರೆಗೂ ಇದರ ಹೆಜ್ಜೆಗಳನ್ನು ಇಡುತ್ತಾ ಬಂದಿದೆ.

ಒಟ್ಟಾರೆ ಸಾವಿರ ವರ್ಷಗಳ ಇತಿಹಾಸ ಇರುವ ಕನ್ನಡ ಸಾಹಿತ್ಯ ಪರಂಪರೆಗೆ ನಿಗದಿತವಾದ ಒಂದೇ ರೂಪ ಇಲ್ಲ. ಇದು ಕಾಲಕಾಲಕ್ಕೆ ತನ್ನ ರೂಪವನ್ನು ಬದಲಿಸುತ್ತ ತನ್ನ ಹೆಜ್ಜೆಯನ್ನು ಇಡುತ್ತ ಸಾಗಿಬಂದಿದೆ. ಕನ್ನಡ ಸಾಹಿತ್ಯ ನಿಜವಾದ ಬದಲಾವಣೆಯನ್ನು ಕಂಡಿದ್ದು, ಪಂಪನ ನಂತರ ಎರಡನೇ ಬಾರಿಗೆ ಎಂದು ಹೇಳಬಹುದು. ಇದಾದನಂತರ ವಚನಕಾರರು, ಕೀರ್ತನೆಕಾರರು ಮುಂತಾದವರ ಕೈಗೆ ಸಿಕ್ಕಿ ತನ್ನ ರೂಪವನ್ನು ಬದಲಿಸುತ್ತ ಮಾರ್ಗ, ದೇಸಿ, ಮತ್ತು ಆಧುನಿಕ ಎಂದು ವಿಭಾಗಿಸಿ ನೋಡುವುದರ ಜೊತೆಗೆ ಸುದೀರ್ಘವಾದ, ಇಷ್ಟೊಂದು ಇತಿಹಾಸ ಇರುವ ಕನ್ನಡ ಸಾಹಿತ್ಯ ಅನೇಕ ಹೆಜ್ಜೆಗಳನ್ನು ಇಡುತ್ತಾ ಅನೇಕ ಕವಿಗಳ ಕೈಗೆ ಸಿಲುಕಿ ಬದಲಾವಣೆ ಹೊಂದುತ್ತಾ ತನ್ನ ರೂಪವನ್ನು ಬದಲಿಸಿಕೊಂಡು ಸಾಗುವುದನ್ನು ಈ ಮೇಲಿನ ಎಲ್ಲಾ ಅಂಶಗಳಿಂದ ನೋಡಬಹುದಾಗಿದೆ.

ಈ ಮೇಲಿನ ಎಲ್ಲಾ ಅಂಶಗಳಿಂದ ನಮಗೆ ತಿಳಿದು ಬರುವುದೇನೆಂದರೆ ಕನ್ನಡ ಎಂಬ ಸಾಹಿತ್ಯ ಪ್ರಕಾರವು ಪ್ರಾರಂಭದಲ್ಲಿ ದ್ರಾವಿಡ ಭಾಷಾ ಎಂಬ ಬೀಜವಾಗಿ ಹುಟ್ಟಿ ಹೆಮ್ಮರವಾಗಿ ಬೆಳೆದು ಹಣ್ಣುಗಳಲ್ಲಿ ಬೀಜಗಳನ್ನು ಸೃಷ್ಟಿಸಿಕೊಂಡು ಮಲೆನಾಡಿನ ರೀತಿಯಲ್ಲಿ ಕಗ್ಗಾಡನ್ನು ಸೃಷ್ಟಿಸಿ ಬೆಳೆದು ನಿಂತಿದೆ.

**ಆಕರ ಗ್ರಂಥ:**

1. ಶಿವರುದ್ರಪ್ಪ ಜಿ.ಎಸ್., (2013) ಕನ್ನಡ ಸಾಹಿತ್ಯ ಸಮೀಕ್ಷೆ. ಸಪ್ನ ಬುಕ್ ಹೌಸ್, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.